

**ನಾರ್ವೆ ದೇಶದ ಫ್ಲಾಮ್ ಎನ್ನುವ ಪುಟ್ಟ ಹಳ್ಳಿ ತನ್ನ ಅಪೂರ್ವ ಚೆಲುವಿನ ಮೂಲಕ ಸಹೃದಯರ ಎದೆಯಲ್ಲಿ ಅಚ್ಚಳಿಯದೆ ಉಳಿದುಬಿಡುತ್ತದೆ. ಪರ್ವತಗಳ ನಡುವೆ, ಸಮುದ್ರದ ನೀರು ನುಗ್ಗಿ ರೂಪುಗೊಂಡ ಸೋಯೆನ್ ಫಿಯೋರ್ಡ್ ಚೆಲುವಿನ ಆತ್ಯಂತಿಕ ಅನುಭವವನ್ನು ಸಹೃದಯರಿಗೆ ಉಂಟುಮಾಡುತ್ತದೆ; ಅಂತಹುದ್ದೇ ಮತ್ತೊಂದು ಅನುಭವ ಫ್ಲಾಮ್‌ಬಾನಾ ರೈಲುಯಾನ.**

■ **ಎಸ್.ಪಿ.ವಿಜಯಲಕ್ಷ್ಮಿ**

ನಾರ್ವೆ ದೇಶದ ನಿಸರ್ಗದ್ದು ಸಹೃದಯರ ಮನಸ್ಸನ್ನು ಇಂಚಿಂಚೂ ಮತ್ತೇರಿಸುವ ಮೋಹಕ ಚೆಲುವು. ಎಲ್ಲಿಂದೆಲ್ಲಿ ಹೋದರೂ ಅನನ್ಯವಾದ ನಿಸರ್ಗಚಿತ್ರಣಗಳು ಮೋಡಿ ಮಾಡುತ್ತವೆ. ನಿಜಕ್ಕೂ ಈ ದೇಶ ಅದೆಷ್ಟು ಸಮೃದ್ಧಿಯಾದ ಚೆಲುವನ್ನು ದೈವದತ್ತವಾಗಿಸಿಕೊಂಡಿದೆ ಎನ್ನುವ ಬೆರಗು ಪ್ರವಾಸಿಗರಿಗೆ ಆಗದಿರಲು ಸಾಧ್ಯವಿಲ್ಲ. ಪ್ರಕೃತಿದೇವಿ ಹರಸಿದ ನಾರ್ವೆದೇಶದ ಒಂದು ಅದ್ಭುತ 'ಫಿಯೋರ್ಡ್'.

ಕಿನ್ನರಲೋಕದಂಥ ಹಳ್ಳಿ 'ಫ್ಲಾಮ್'. ಅಲ್ಲಿಯ ವಿಶಿಷ್ಟ 'ಫ್ಲಾಮ್ ಲೈನ್' ಎಂಬ ರೈಲುಯಾನ ಮತ್ತು ದಾರಿಯಲ್ಲಿ ಸಿಗುವ 'ಮೀರ್ಡಾಲ್' ಎಂಬ ಹಿಮಲೋಕದ ಸ್ಟೇಷನ್ – ಇವು ನಾರ್ವೆ ಪ್ರವಾಸದ ಅತಿ ರೋಚಕ ಮತ್ತು ಮತ್ತೇರಿಸುವ ಅನುಭವಕ್ಕೆ ಸಾಕ್ಷಿಯಾಗಿಬಿಡುತ್ತವೆ.

## 'ಫಿಯೋರ್ಡ್' ಏನಿದು?

'ಫಿಯೋರ್ಡ್' ಎಂದರೆ ಎರಡು ಪರ್ವತಾವಳಿಗಳ ನಡುವೆ ಇಕ್ಕಟ್ಟಾದ, ಉದ್ದವಾದ, ಆಳವಾದ ಕಣಿವೆಯಲ್ಲಿ ಸಮುದ್ರದ ನೀರು ನುಗ್ಗಿ ಉಂಟಾದ ವಿದ್ಯಮಾನ. ಹರಹು ಅಗಲವಿದ್ದರೆ ಅದು 'ಬೇ' (ಕೊಲ್ಲಿ) ಎನ್ನಿಸಿಕೊಳ್ಳುತ್ತದೆ. ನಾರ್ವೆದೇಶದಲ್ಲಿ ಈ ಫಿಯೋರ್ಡ್‌ಗಳ ರಚನೆ ಸಾಕಷ್ಟಿದೆ. ವಿಶ್ವದ ಎರಡನೆಯ ಮತ್ತು ಅತಿ ಉದ್ದ, ಆಳದ 'ಫಿಯೋರ್ಡ್' ಎನ್ನುವ ಹೆಗ್ಗಳಿಕೆ ಪಡೆದ ನಾರ್ವೆಯ 'ಸೋಯೆನ್ ಫಿಯೋರ್ಡ್'ನಲ್ಲಿದೆ 'ಫ್ಲಾಮ್' ಎಂಬ ಪುಟ್ಟದಾದರೂ ಸ್ವರ್ಗಸೀಮೆಯಂಥ ಚೆಲುವಿನ ಹಳ್ಳಿ.

ಸೋಯೆನ್ ಫಿಯೋರ್ಡ್ ಯುನೆಸ್ಕೊ ಪಟ್ಟಿಗೆ ಸೇರಿದ್ದು, 'ಫ್ಲಾಮ್‌ಬಾನಾ ರೈಲ್ವೇ' ಎನ್ನುವ ಅತ್ಯದ್ಭುತ, ರೋಚಕ ರೈಲ್ವೇ ಸಿಸ್ಟಂ ಅನ್ನು ತನ್ನ ಮಡಿಲಲ್ಲಿಟ್ಟುಕೊಂಡಿದೆ. ಈ ಫ್ಲಾಮ್‌ಗೆ ಹೋಗುವವರ ಮೊದಲ ಆದ್ಯತೆ ಫ್ಲಾಮ್‌ಬಾನಾ ರೈಲಿನ ಅನುಭವ ಪಡೆಯುವುದಾಗಿದೆ.

## ಅಸೀಮ ಚೆಲುವಿನ ದೇಶ

ನಾರ್ವೆಯ 'ಓಸ್ಲೋ' ಸಿಟಿಯಿಂದ 'ಬೆರ್ಗೆನ್'ಗೆ ಹೋಗುವ ಹಾದಿ ಬಣ್ಣನೆಗೆ ನಿಲುಕದಷ್ಟು ವಿಸ್ಮಯಕಾರಿಯಾಗಿತ್ತು. ಕಪ್ಪುಬಣ್ಣದ ನೀಟಾದ ರಸ್ತೆಯ ಇಕ್ಕೆಲಗಳಲ್ಲೂ ಕಿಲೋಮೀಟರ್‌ಗಟ್ಟಳೆ ಉದ್ದದ ಸರೋವರಗಳು ಹೆಪ್ಪುಗಟ್ಟಿ ಬಯಲಿಗೆ ಬೆಳ್ಳನೆಯ ಚಾದರ ಹೊದಿಸಿದಂತಿತ್ತು. ದೂರದ ಪರ್ವತಶ್ರೇಣಿಗಳೂ ಹಿಮ ಹೊದ್ದುಕೊಂಡು ಬಿಳುಪಾಗಿದ್ದವು. ಸೂರ್ಯ ದೂರದಲ್ಲೆಲ್ಲೋ ಅಡಗಿದ್ದರಿಂದ ನೀಲಮೇಘಗಳಿಲ್ಲದೆ ಆಗಸವೂ ಧವಳವರ್ಣದಲ್ಲಿದ್ದು, ಯಾವುದೇ ಜೀವಜಗತ್ತು ಕಣ್ಣಿಗೆ ಬೀಳದ, ಹಸಿರುಹೂ ಬಣ್ಣಗಳಿಲ್ಲದ, ಅಕ್ಷರಶಃ ಒಂದು ಬೆಳಕಿನ ಗೋಲದಲ್ಲಿ ನಾವು ತೂರಿಕೊಂಡು ಹೋಗುತ್ತಿರುವಂತೆ ಮನಸ್ಸು ಭ್ರಮಾಧೀನಗೊಂಡಿತ್ತು. ಸಾವಿನ ನಂತರ ಮೋಕ್ಷಲೋಕದ ಮೊದಲಿಗೆ